**<u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.</u>**

**ಸಿ.ಸಿ. ಸಂಖ್ಯೆ: 723/2024**

**ಸಾಕ್ಷಿಯನ್ನು ದಿಃ 18.11.2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಹೆಸರು | ತೇಜಸ್ವಿನಿ ಹೆಚ್.ಎಸ್ | ಸಿಡಬ್ಲ್ಯೂಃ 3 | ಪಿಡಬ್ಲ್ಯೂಃ 3 |
| ತಂದೆಯ ಹೆಸರು | ಶಿವಶಂಕರ್ | | |
| ವಯಸ್ಸು | 19 ವರ್ಷ | | |
| ಕೆಲಸ | ವಿದ್ಯಾರ್ಥಿನಿ | | |
| ವಾಸಸ್ಥಳ | ಕಲ್ಲುಣಿಕೆ | | |

**<u>ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ</u>**

ಚಾಸಾ-1 ನನ್ನ ತಂದೆ. ಚಾಸಾ-2 ನನ್ನ ತಾಯಿ. ಚಾಸಾ-4 ಮತ್ತು 5 ಗೊತ್ತು. ನ್ಯಾಯಾಲಯದ ಮುಂದಿರುವ ಆರೋಪಿ ಗೊತ್ತು. ನಾನು ಈ ಪ್ರಕರಣದ ಬಗ್ಗೆ ಪೋಲೀಸ್ ಠಾಣೆಯಲ್ಲಿ ಹೇಳಿಕೆ ನೀಡಿದ್ದೇನೆ.

ದಿಃ 04.03.2024 ರಂದು ಮಧ್ಯಾಹ್ನ 2 ಗಂಟೆಗೆ ಚಾಸಾ-1 ರವರು ಹುಷಾರಿಲ್ಲದೇ ಮನೆಯಲ್ಲಿ ಮಲಗಿದ್ದರು. ಆಗ ಆರೋಪಿ, ಜಿತೇಂದ್ರ ಮತ್ತು ಪ್ರಿಯಾ ನಮ್ಮ ಮನೆಗೆ ಬಂದರು. ಚಾಸಾ-1 ರವರನ್ನು ಮನೆಯಿಂದ ಹೊರಗೆ ಕರೆದರು. ಕೆಟ್ಟ ಮಾತುಗಳಿಂದ ಬೈದರು ಹಾಗೂ ಸೈಟ್ ಮತ್ತು ಗದ್ದೆಯನ್ನು ನನಗೆ ಗೊತ್ತಿಲ್ಲದಂತೆ ಬರೆಸಿಕೊಂಡಿದ್ದಿರಿ ಎಂದು ಜಗಳ ಮಾಡಿದರು. ನಮ್ಮ ಅಜ್ಜಿ ನಡೆಯಲು ಉಪಯೋಗಿಸುವ ಊರುಗೋಲಿನಿಂದ ಚಾಸಾ-1 ರವರ ತಲೆಯ ನೆತ್ತಿಗೆ, ಮೈಕೈಗೆ ಮತ್ತು ಭುಜಕ್ಕೆ ಹೊಡೆದರು. ನೆತ್ತಿಗೆ ರಕ್ತಗಾಯವಾಯಿತು. ಚಾಸಾ-1 ರವರು ಬಿಡಿಸಿಕೊಂಡು ಆಸ್ಪತ್ರೆಗೆ ಹೋಗಲು ಬಂದರು. ನಾನು ಚಾಸಾ-1 ರವರನ್ನು ಆಟೋದಲ್ಲಿ ಹುಣಸೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆ. ಈಗ ತಪ್ಪಿಸಿಕೊಂಡಿದ್ದಿಯಾ ಇನ್ನೊಮ್ಮೆ ಬಂದಾಗ ಸಾಯಿಸುತ್ತೇನೆ ಎಂದು ಕೊಲೆ ಬೆದರಿಕೆ ಹಾಕಿದರು. ಈ ಹೇಳಿಕೆಯನ್ನು ದಿಃ 06.03.2024ರಂದು ಪೋಲಿಸರ ಮುಂದೆ ಹೇಳಿದ್ದೇನೆ. ಆರೋಪಿ ಚಾಸಾ-1 ರವರಿಗೆ

ಹಲ್ಲೆ ಮಾಡಲು ಉಪಯೋಗಿಸಿದ್ದ ದೊಣ್ಣೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಮು.ಮಾ-1 ನ್ನು ನೋಡಿ ಗುರುತಿಸುತ್ತಾರೆ. ಆ ದಿನ ಚಾಸಾ-1 ರವರಿಗೆ ಹಲ್ಲೆ ಮಾಡಿದ ಆರೋಪಿ ಈ ದಿನ ನ್ಯಾಯಾಲಯದ ಮುಂದೆ ಇದ್ದಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. HRV ವಕೀಲರಿಂದಃ**

ಆರೋಪಿ ಹಾಜರಿದ್ದು, ಆರೋಪಿ ಪರ ವಕೀಲರು ಗೈರು ಹಾಜರಾಗಿದ್ದು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.